# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 27
2. ಸದಸ್ಯರ ಹೆಸರು : ಶ್ರೀ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾಗಿದ್ದ ದಿನಾಂಕ : 13.02.2023
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಎ.ಡಿ.ಜಿ.ಪಿ, ಕೆ.ಎಸ್.ಆರ್.ಪಿ, ಎ.ಡಿ.ಜಿ.ಪಿ, ನೇಮಕಾತಿ ಮತ್ತು ಎಡಿಜಿಪಿ, ಆಡಳಿತ ಹಾಗೂ ಎ.ಸಿ.ಎಸ್ ಗೃಹ ಇಲಾಖೆಯವರನ್ನೊಳ ಗೊಂಡಂತೆ ದಿನಾಂಕ:22.03.2022 ರಂದು ನಡೆದ ಸಭಾ ನಡವಳಿ ಸಂಖ್ಯೆ: ಒಇ 42 ಪಿಪಿಎಸ್ 2019, ದಿನಾಂಕ:31.05.2022ರಲ್ಲಿ ಸ್ಪಷ್ಟವಾಗಿ ಕರೆ ಪತ್ರ ಕಳುಹಿಸಲಾದ 488 ಅಭ್ಯರ್ಥಿಗಳಲ್ಲಿ 111 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದು, ಉಳಿದ ಅಭ್ಯರ್ಥಿಗಳಿಗೆ ನೀಡದಿರುವುದನ್ನು ಪರಿಗಣಿಸಿ ಇದೇ ಕ್ರಮವನ್ನು ಮುಂದುವರೆಸಿ ಒಂದು ಬಾರಿಯ ಕ್ರಮವಾಗಿ ಮಾನವೀಯ ನೆಲೆಯಲ್ಲಿ 250 ಉಳಿದಿರುವ ಐ.ಆರ್.ಬಿ ಅಭ್ಯರ್ಥಿಗಳಿಗೆ ಅಂತಿಮ ಅವಕಾಶ ವನ್ನು ನೀಡುವಂತೆ ಸ್ಪಷ್ಟವಾಗಿ ಆದೇಶಿಸ್ ಲಾಗಿದ್ದು, ಪ್ರಸ್ತುತ ಪ್ರಕ್ರಿಯೆಯು ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | 2012ನೇ ಸಾಲಿನ ಐ.ಆರ್.ಬಿ ಘಟಕಗಳ 750 ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ಲಭ್ಯವಿರುವ ಮಾಹಿತಿ / ದಾಖಲೆಗಳ ವಿವರ ಕೆಳಕಂಡಂತಿರುತ್ತದೆ:-<br>• ಸರ್ಕಾರದ ಅಧಿಸೂಚನೆ ಸಂಖ್ಯೆ: 10/ನೇಮಕಾತಿ-4/ ಐಆರ್‌ಬಿ/2011-12, ದಿನಾಂಕ: 09.01.2012 ರಲ್ಲಿ ಐಆರ್‌ಬಿ ಘಟಕಗಳ 750 ಸ್ಪೆ.ಆರ್.ಪಿ.ಸಿ ಹುದ್ದೆಗಳ ನೇಮಕಾತಿಗೆ ಅಧಿಸೂಚಿಸಲಾಗಿತ್ತು.<br>• ಪ್ರಥಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ 750 ಅಭ್ಯರ್ಥಿಗಳು, ಮೊದಲ ಹೆಚ್ಚುವರಿ ಪಟ್ಟಿಯಿಂದ 354 ಅಭ್ಯರ್ಥಿಗಳು ಮತ್ತು ಎರಡನೇ ಹೆಚ್ಚುವರಿ ಪಟ್ಟಿಯಿಂದ 134 ಅಭ್ಯರ್ಥಿಗಳು ಸೇರಿದಂತೆ ಒಟ್ಟು 1238 ಅಭ್ಯರ್ಥಿಗಳನ್ನು ದಾಖಲೆ ಪರಿಶೀಲನೆಗೆ ಕರೆಯಲಾಗಿದೆ.<br>• ಕೆ.ಎಸ್.ಆರ್.ಪಿ ಕೇಂದ್ರ ಕಛೇರಿಯ ಪತ್ರ ಸಂಖ್ಯೆ 11/ಸಿಬ್ಬಂದಿ-2/2011-12, ದಿನಾಂಕ: 27.02.2013 ರಲ್ಲಿ ಹೊರಡಿಸಲಾದ 750 ಅಭ್ಯರ್ಥಿಗಳ ಪ್ರಥಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ 611 ಅಭ್ಯರ್ಥಿಗಳನ್ನು ಮೊದಲ ಹೆಚ್ಚುವರಿ ಪಟ್ಟಿ 354 ರಲ್ಲಿ 138 ಅಭ್ಯರ್ಥಿಗಳು ಮತ್ತು ಎರಡನೇ ಹೆಚ್ಚುವರಿ ಪಟ್ಟಿ 134 ರಲ್ಲಿ 1 ಅಭ್ಯರ್ಥಿಯು ಸೇರಿದಂತೆ ಒಟ್ಟು 750 ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಸಂಖ್ಯೆ 11/ಸಿಬ್ಬಂದಿ-2/2011-12, ದಿನಾಂಕ: 03.01.2014 ರಲ್ಲಿ ಹೊರಡಿಸಲಾಗಿದೆ.<br>• 750 ಅಭ್ಯರ್ಥಿಗಳ ಪ್ರಥಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ 139 ಅಭ್ಯರ್ಥಿಗಳನ್ನು ಮೊದಲ ಹೆಚ್ಚುವರಿ ಪಟ್ಟಿಯ 354 ಅಭ್ಯರ್ಥಿಗಳಲ್ಲಿ 216 ಅಭ್ಯರ್ಥಿಗಳನ್ನು ಮತ್ತು ಎರಡನೇ ಹೆಚ್ಚುವರಿ ಪಟ್ಟಿಯ 134 ಅಭ್ಯರ್ಥಿಗಳಲ್ಲಿ 133 ಅಭ್ಯರ್ಥಿಗಳು ಸೇರಿದಂತೆ ಒಟ್ಟು 488 ಅಭ್ಯರ್ಥಿಗಳನ್ನು ಮುಖ್ಯವಾಗಿ ಸ್ವಂತ ಕಚೇರಿ, ವೈದ್ಯಕೀಯ ಪರೀಕ್ಷೆಯ |

| | | |
|---|---|---|
| | | ಅನರ್ಹತೆ, ಗೈರು ಹಾಜರಿ, ಜಾತಿ ಪ್ರಮಾಣ ಪತ್ರ ಅಮಾನ್ಯವಾದ ಮೆರಿಟ್ ಆಧಾರದ ಮೇಲೆ ಮತ್ತು ಇನ್ನಿತರ ಕಾರಣಗಳಿಂದ ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿದೆ.<br>• ಐ.ಆರ್.ಬಿ 750 ಸ್ಪೆ.ಆರ್.ಪಿ.ಸಿ ಹುದ್ದೆಗಳಲ್ಲಿ ನೇಮಕಾತಿ ಆದೇಶ ಹೊರಡಿಸಿ ಬಾಕಿ ಉಳಿದ ರಿಕ್ತ ಹುದ್ದೆಗಳನ್ನು ತದನಂತರದಲ್ಲಿ ಕೈಗೊಳ್ಳಲಾದ ನೇಮಕಾತಿಗಳಲ್ಲಿ ಭರ್ತಿ ಮಾಡಲಾಗಿರುತ್ತದೆ.<br>• ದಿನಾಂಕ: 22.03.2022 ರಂದು ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶವನ್ನು ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಡಿಜಿ & ಐಜಿಪಿ ರವರಿಗೆ ಸೂಚಿಸಲಾಗಿತ್ತು. ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ. | ಬಾಕಿ ಉಳಿದ ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಯಾವ ರೀತಿಯ ದಾಖಲಾತಿಗಳ ಅವಶ್ಯಕತೆ ಇದೆ, ಪ್ರಸ್ತುತ ಯಾವ ಯಾವ ದಾಖಲೆಗಳು ಲಭ್ಯವಿದೆ. ಲಭ್ಯವಿರದ ದಾಖಲೆಗಳು ಯಾವುವು; ಈ ದಾಖಲೆಗಳ ಸಂರಕ್ಷಣೆಯ ಜವಾಬ್ದಾರಿ ಯಾವ ಯಾವ ಅಧಿಕಾರಿಗಳದ್ದಾಗಿದೆ, ದಾಖಲೆಗಳು ಕಳೆದು ಹೋದಲ್ಲಿ ಅಥವಾ ನಾಶವಾಗಿದ್ದಲ್ಲಿ ಸಂಬಂಧಿಸಿದ ಅಧಿಕಾರಿಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ:(ವಿವರ ನೀಡುವುದು) | ದಾಖಲೆಗಳ ಪರಿಶೀಲನೆ ಪೂರ್ಣವಾಗಿದೆ. |
| ಇ. | ಬಾಕಿ ಉಳಿದ ಐ.ಆರ್.ಬಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಯಾವಾಗ ನೀಡಲಾಗುವುದು ಹಲವಾರು ಅಭ್ಯರ್ಥಿಗಳು ವಯೋಮಿತಿ ಮೀರುವ ಮಾನವೀಯ ನೆಲೆಗಟ್ಟಿನಲ್ಲಿ ತುರ್ತಾಗಿ ನೇಮಕಾತಿ ಆದೇಶ ನೀಡಲು ಯಾವ ಹಂತದಲ್ಲಿದ್ದು, ಕ್ರಮ ಕೈಗೊಳ್ಳಲಾಗಿದೆ? | ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |

ಒಇ 33 ಪಿಪಿಎಂ 2023

(ಆರಗ ಜ್ಞಾನೇಂದ್ರ)
ಗೃಹ ಸಚಿವರು